ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಹಿಂದೆ ಕೆಲವು ಎಯಿಡೆಡ್ ಬ್ರೀಡರ್ಸಿಗೆ ಕೊಟ್ಟಿದ್ದು, ಅವರು ಕೈಬಿಟ್ಟಿದ್ದ ಬಗ್ಗೆ ಆಕ್ಷೇಪಣೆ ಬಂದಾಗ ನಿಲ್ಲಿಸಿದ್ದಂಥ ಜಪ್ತೀನುಗಳನ್ನು ಈಗ ಹಿಂದಕ್ಕೆ ಬಿಟ್ಟುಕೊಡಲು ಒಪ್ಪಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಹಾಗಾಗಿ ನಮಗೆ ಪರಿಹಾರ ಕೊಟ್ಟು ಆ ಕ್ಯಾಟಲುಗಳ ನ್ನೆಲ್ಲಾ ನೀವೇ ತಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಅಂಥ ಕೆಲವು ಎಯಿಡೆಡ್ ಬ್ರೀಡರ್ಸ್‌ಗಳ ಕೇಸುಗಳು ಪರಿಶೀಲನೆಯಲ್ಲಿವೆ, ಯಾವುದನ್ನೂ ಇನ್ನೂ ಇತ್ಯರ್ಥ ಮಾಡಿಲ್ಲ.

Amount spent on Upper Krishna Project.

*Q.—150. Sri R. S. PATIL (Ramdurg).—

Will the Government be pleased to state :—

the amount spent on Upper Krishna Project so far (break up of figures as regards amount spent on Almatti and Narayanapur Sites may be given) ?

A.—Sri S. NIJALINGAPPA (Chief Minister).—

A total expenditure of Rs. 57.32 lakhs (excluding establishment charges) has been incurred upto September 1964. The break up is as under :—

Almatti	Rs.	31.80 lakhs.
Narayanapur	Rs.	25.52 lakhs.

ಶ್ರೀ ಆರ್. ಎಸ್. ಪಾಟೀಲ್.—ಕೃಷ್ಣಾ ಮೇಲ್ದಂಡೆಯ ಸಂಬಂಧದಲ್ಲಿ ಇಲ್ಲಿಯವರೆಗೆ ನಾರಾಯಣಪುರದ ಬಳಿ ಖರ್ಚು ಮಾಡಿರತಕ್ಕ ಹಣ 25.52 ಲಕ್ಷ ಎಂದು ಹೇಳಲಾಗಿದೆ. ಆದರೆ ಇತ್ತೀಚೆಗೆ ಈ ಕಾರ್ಯವನ್ನು ಅಲ್ಲಿಂದ ಬೇರೆ ಕಡೆಗೆ ಸ್ಥಳಾಂತರಿಸುತ್ತಾರೆಂಬ ವದಂತಿ ಕೇಳುತ್ತಿದ್ದೇವೆ, ಹಾಗಿರುವಾಗ ಅಲ್ಲಿ ಅಷ್ಟು ಹಣ ಏತಕ್ಕೆ ಖರ್ಚಾಯಿತು ?

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿ ಹಾಕಬೇಕೆಂದಿದ್ದ ಡ್ಯಾಮನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ತೀರ್ಮಾನವಾಗಿದೆ ಇದಕ್ಕೆ ಸಂಬಂಧಪಟ್ಟ ಕೇಂದ್ರ ಸರ್ಕಾರದ ಮಂತ್ರಿಗಳೂ ಸ್ಥಳ ಪರಿಶೀಲನೆ ಮಾಡಿ ಆ ಕಟ್ಟಡವನ್ನು ಆಲಮಟ್ಟಿ ಎಂಬ ಸ್ಥಳಕ್ಕೆ 2-3 ಮೈಲಿಗಳ ದೂರದಲ್ಲಿರತಕ್ಕ ಸಿದ್ದಾಪುರಕ್ಕೆ ಬದಲಾಯಿಸಿದರೆ ನೀರನ್ನು ಇನ್ನೂ 10 ಅಡಿ ಹೆಚ್ಚಿಗೆ ನಿಲ್ಲಿಸಬಹುದು, ಖರ್ಚೂ ಸಹಾ ಕಡಿಮೆಯಾಗುತ್ತದೆಂದು ಹೇಳಿದ್ದಾರೆ ಅದಕ್ಕಾಗಿ ಈಗ ಅಲ್ಲಿ ಕಚ್ಚೆಮಾಡುವುದನ್ನು ನಿಲ್ಲಿಸಿದ್ದೇವೆ.

ಶ್ರೀ ಆರ್. ಎಸ್. ಪಾಟೀಲ್.—ಸಿದ್ದಾಪುರದಬಳಿ ಅದನ್ನು ಮಾಡಬೇಕೆಂದು ರಾಜ್ಯ ಸರ್ಕಾರದವರು ಸಲಹೆಮಾಡಿದರೋ ಅಥವಾ ಅದು ಕೇಂದ್ರದವರಿಂದ ಬಂದ ಸಲಹೆಯೋ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ನಮ್ಮ ಸಲಹೆಯಲ್ಲ ಸಿ.ಡಬ್ಲು.ಪಿ.ಸಿ. ಅವರ ಹಾಗೂ ನಮ್ಮ ಇಂಜನಿಯರುಗಳ ಸಲಹೆ, ಇದರ ವಿಚಾರದಲ್ಲಿ ನಾವೀಗ ಒಂದು ಅಬ್ಸೈರು ತೀರ್ಮಾನಕ್ಕೆ ಸಧ್ಯದಲ್ಲೇ ಬರುವವರಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸ್ಥಳಬದಲಾವಣೆ ವಿಚಾರದಲ್ಲಿ ಸರ್ಕಾರಕ್ಕೆ ಕಂಟ್ರಾಕ್ಟರಿಂದ 10-12 ಲಕ್ಷ ರೂಪಾಯಿ ನಷ್ಟವಾಗಿದೆ. ಆದನ್ನು ಕೊಡಿಸಿಕೊಡಿ ಎಂಬುದಾಗಿ ಅರ್ಜಿ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

ಶ್ರೀ ಆರ್. ಎಸ್. ಪಾಟೀಲ್.—ಸರ್ಕಾರದವರು 130-150 ಕೋಟಿ ರೂಪಾಯಿ ಖರ್ಚಾಗತಕ್ಕ ಕಡೆ ವರ್ಷಕ್ಕೆ 25-30 ಲಕ್ಷ ಖರ್ಚುಮಾಡುತ್ತಿದ್ದರೆ ನಾವು ಈ ಯೋಜನೆಯನ್ನು ಕಣ್ಣಲ್ಲಿ ನೋಡುವುದು ಯಾವಾಗ ?

ಶ್ರೀ ಎಸ್. ನಿಜಲಿಂಗಪ್ಪ.—ಆದಷ್ಟೂ ಜಾಗ್ರತೆ ಮಾಡಿಸೋಣ. ಆದರೆ ಇದು ಭಾರಿ ಪ್ರಮಾಣದ ಪ್ರಾಜೆಕ್ಟ್, ಇದಕ್ಕೆ ಹೆಚ್ಚಿನ ಹಣ ಬೇಕಾಗುವುದು. ಇದಕ್ಕೆ ಕೇಂದ್ರ ಸರ್ಕಾರದವರು ಹಣವನ್ನು ಒದಗಿಸದಿದ್ದರೆ ಸಾಧ್ಯವಾಗುವದಿಲ್ಲ ಎಂಬುದಾಗಿ ನಾವು ಅವರಿಗೆ ತಿಳಿಸಿದ್ದೇವೆ.

2-00 P.M.

ಶ್ರೀ ಮಹಾಂತಸ್ವಾಮಿ ವಿರೂಪಾಕ್ಷಯ್ಯ.—25 ಲಕ್ಷ 52 ಸಾವಿರ ರೂಪಾಯಿಗಳಲ್ಲಿ ಫೌಂಡೇಷನ್‌ಗೆ ಎಷ್ಟು ಮತ್ತು ಸಿಬ್ಬಂದಿಯ ವಾಸದ ಕಟ್ಟಡಗಳಿಗೆ ಎಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿವರ ನನ್ನಲ್ಲಿ ಇಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ನಾರಾಯಣಪುರ ಮತ್ತು ಸಿದ್ಧಾಪುರದ ಎಸ್ಟಿಮೇಟು ಈಗಾಗಲೇ ತಯಾರಾಗಿದೆಯೇ ? ಮತ್ತು ಸಿದ್ಧಾಪುರದಲ್ಲಿ ಕಟ್ಟುವುದರಿಂದ ಎಷ್ಟು ಪ್ರದೇಶ ಮುಳುಗಡೆಯಾಗುತ್ತದೆ ಎಂಬ ಅಂಕಿಅಂಶ ಇದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನ್ಯೂಲವಾಗಿ ಹೇಳುವುದಾದರೆ, ಸಿದ್ಧಾಪುರದಲ್ಲಿ ಕಟ್ಟುವುದರಿಂದ ನೀರು ಮುಳುಗಡೆ ಕಡಿಮೆಯಾಗುತ್ತದೆ ಎಂದು ಗೊತ್ತಾಗಿದೆ. ಅದಕ್ಕೂ ನಾರಾಯಣಪುರಕ್ಕೂ ವ್ಯತ್ಯಾಸ ಎಷ್ಟಾಗುತ್ತದೆ ಎಂಬ ಅಂಕಿಅಂಶ ಇಲ್ಲ ; ಮಾನ್ಯ ಸದಸ್ಯರು ಮತ್ತೊಂದು ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಈಗ ನಾರಾಯಿಣಪುರದ ಡ್ಯಾಂಗೆ 25.25 ಲಕ್ಷ ರೂಪಾಯಿ ಖರ್ಚುಮಾಡಿದ್ದೇವೆ ಎಂದು ಹೇಳಿದಿರಿ. ಈಗ ಕೊಟ್ಟಿರತಕ್ಕ ಕಂಟ್ರಾ್ಯಕ್ಟರಿಗೇ ಬೇರೆ ಕಡೆ ಕಟ್ಟತಕ್ಕ ಕಂಟ್ರಾ್ಯಕ್ಟನ್ನೂ ಮುಂದುವರಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಹೇಗೆ ಇರುತ್ತದೆಯೋ, ಆವರು ಒಪ್ಪುತ್ತಾರೆಯೋ ಇಲ್ಲವೋ ಇದನ್ನೆಲ್ಲಾ ವಿಚಾರ ಮಾಡಬೇಕಾಗುತ್ತದೆ.

Mr. SPEAKER.—Question House is over.

QUESTION FOR ANSWERS ON THE DAY.

(but not taken up)

Construction of a pick-up near Mukkadahally in Chamarajanagar Taluk.

*Q.—247. Sri. M. C. BASAPPA (Chamarajanagar).—

Will the Government be pleased to state:—

(*a*) wehter an estimate for the construction of a pick-up near Mukkadhally Village in Cha marajanagar Taluk has been prepared and if so, when;

(*b*) the estimated cost of the same ;

(*c*) when it is likely to be sanctioned ;

(*d*) the reasons for the delay in sanctioning the same ?

*A.— Sri ALUR HANUMANTHAPPA (Deputy Minister for Minor Irrigation).—

(*a*) Yes, in March, 1963.

(*b*) Rs. 40,000.

(*c*) After funds are made available for the work.

(*d*) Limited funds and heavy spill-over.